ಬಳಸುವ ವ್ಯಂಜನಾಂತ ಭಾಷೆ, ಪ್ರಯೋಗ ಅವರಿಗೆ ಇಷ್ಟವಿರಲಿಲ್ಲ.

ಗಿರೀಶ 1963ರಲ್ಲಿ ಆಕ್ಸ್‌ಫರ್ಡ್‌ಗೆ ಹೋದ ನಂತರ ಸಿಗರೇಟು ಸೇದುವ ಚಟಕ್ಕೆ ಈಡಾಗಿದ್ದರು; 1986ರ ನಂತರ ಅದರಿಂದ ದೂರವಾದರು. ಬಿಯರ್ ಕುಡಿಯುವುದು ಮಾತ್ರ ಉಳಿದುಕೊಂಡಿತ್ತು. ಅದು ಚಟವಾಗಿರದಿದ್ದರೂ ಮಿತ್ರರೊಂದಿಗೆ, ಕಂಪನಿಯಲ್ಲಿ ಅದನ್ನು ಬಿಡದಾಗಿದ್ದರು. ದಿನಾಲು ಚುಟುಕಾಗಿ, ಸಂಕ್ಷಿಪ್ತವಾಗಿ, ಟಿಪ್ಪಣಿ ರೂಪದಲ್ಲಿ ಡೈರಿ ಬರೆಯುವ ಅಭ್ಯಾಸವನ್ನು ಕೊನೆಯ ವರೆಗೂ ಉಳಿಸಿಕೊಂಡಿದ್ದರು. ಬರೆದ ನಾಟಕವನ್ನು ಗೆಳೆಯರ ಮುಂದೆ ಓದುವುದು, ತಿದ್ದಿಕೊಳ್ಳುವುದು ಗಿರೀಶರಿಗೆ ಸೇರುವ ಕಾಯಕ. ಅದರಿಂದ ತನ್ನ ಕೃತಿಗಳಿಗೆ ಒಳ್ಳೆಯದೇ ಆಗಿದೆ ಎಂದು ಭಾವಿಸಿದ್ದರು. ಅವರು ಬರೆದ ನಾಟಕಗಳನ್ನು ಸಾಮಾನ್ಯವಾಗಿ ಕುರ್ತಕೋಟಿ, ಜಿ.ಬಿ. ಜೋಶಿ ಮೊದಲು ಓದುತ್ತಿದ್ದರು, ಅನಂತರ ಆಯ್ದ ಗೆಳೆಯರ ಮಂಡಳಿಯಲ್ಲಿ ಸ್ವತಃ ಗಿರೀಶರೇ ವಾಚನ ಮಾಡುತ್ತಿದ್ದರು. ವಾಚನ ಅಥವಾ ಓದಿನಲ್ಲಿ ಅವರದು ಸ್ವಲ್ಪ ಅವಸರದ, ಗಡಿಬಿಡಿಯ ಶೈಲಿ. ಆದರೆ, ನಡುನಡುವೆ ತಮ್ಮ ಕೃತಿ ಹಾಗೂ ಅದರ ಹಿನ್ನೆಲೆಯನ್ನು ವಿವರಿಸುತ್ತ, ವಿಷಯಾಂತರ ಮಾಡದೇ, ಚಹ ಸೇವಿಸುತ್ತ ಮುಂದುವರಿಸುತ್ತಿದ್ದರು.

ಒಮ್ಮೆ ಒಂದು ನಾಟಕ ವಾಚನ ಕಾರ್ಯಕ್ರಮ ಅವರ ಮನೆಯಲ್ಲಿ ನಡೆದಿತ್ತು. ಆಗಷ್ಟೆ ಬರೆದು ಮುಗಿಸಿದ್ದ 'ತಲೆದಂಡ' ನಾಟಕದ ಬಗ್ಗೆ ಅವರಿಗೆ ಅಪಾರ ಅಭಿಮಾನ, ಆತ್ಮವಿಶ್ವಾಸವಿತ್ತು. ಬಸವಣ್ಣ, ಬಿಜ್ಜಳ, ಇತರ ಶರಣರನ್ನು ಕುರಿತು ಬರೆದ ನಾಟಕವಾಗಿದ್ದರಿಂದ, ನಾಟಕಾಸಕ್ತರಾದ ನಮ್ಮಂಥ ಗೆಳೆಯರಲ್ಲದೇ, ಒಂದಿಬ್ಬರು ಶರಣ ಸಾಹಿತ್ಯತಜ್ಞ ಸಂಗಡಿಗರನ್ನು ಆಮಂತ್ರಿಸಿದ್ದರು. ನಾಟಕ ವಾಚನ ನಡೆದಂತೆ ತಜ್ಞ ಆಮಂತ್ರಿತರಿಗೆ ಇರಿಸು—ಮುರಿಸು, ತೊಡಕು ಅನಿಸತೊಡಗಿತು; ಅದು ಹಾಗಲ್ಲ, ಹೀಗಲ್ಲ ಎಂದು ಹೇಳತೊಡಗಿದರು. ಗಿರೀಶ ತಾವು ಓದಿದ ಎಲ್ಲ ಕೃತಿಗಳನ್ನು ಉಲ್ಲೇಖಿಸಿದರು. ಅವರಿಗೆ ಶರಣರ ಇತಿಹಾಸ ಹಾಗೂ ಚಾರಿತ್ರಿಕ ಸತ್ಯಾಸತ್ಯತೆಯ ನಾಟಕೀಯ ದ್ವಂದ್ವದ ಚಿತ್ರಣ ಮುಖ್ಯವಾಗಿತ್ತು, ನಾಟಕದಿಂದ ಮೂಡುವ ಚರಿತ್ರೆ, ಪ್ರಭಾವ ಪ್ರಧಾನವಾಗಿತ್ತು. ನವಮಿತ್ರರಿಗೆ ಇತಿಹಾಸದಿಂದ ಹೊರಚಿಮ್ಮುವ ಸತ್ಯದ ಬೆಳಕು ಮುಖ್ಯವೆನಿಸಿತ್ತು. ಗಿರೀಶ ವಾಚನ ಮುಗಿಸಿದರು. ಬಹಳ ಕಾಲದ ನಂತರ ಗಿರೀಶರ ಕೃತಿಯಲ್ಲಿ ಧಾರವಾಡದ ನಮ್ಮ, ನಾವು ಆಡುವ ಭಾಷೆಯ ನಾಟಕ ಆಟವಾಡತೊಡಗಿತ್ತು. ನಾನು ಹೇಳಿದೆ, "ಅಂದಿನ ಇತಿಹಾಸವನ್ನು, ಘಟನೆಗಳನ್ನು ನೀವು ಇಬ್ಬರೂ ಕಣ್ಣಾರೆ ಕಂಡಿಲ್ಲ, ಅದಕ್ಕೆ ಸಾಕ್ಷಿಯಾಗಿಲ್ಲ; ಆ ಇತಿಹಾಸವನ್ನು ಕುರಿತು ಓದಿ ಈಗ ಗಿರೀಶ ನಾಟಕದ ಮೂಲಕ 'ತಮಗನಿಸಿದಂತೆ ಹೇಳುತ್ತಿದ್ದಾರೆ', ನೀವು ನಿಮ್ಮ ಅಧ್ಯಯನದ ಮೂಲಕ 'ಹೊಳೆದದ್ದನ್ನು ವಿಶ್ಲೇಷಿಸುತ್ತಿದ್ದೀರಿ.' ಈಗ ಇಲ್ಲಿ ನಡೆದಿರುವುದು ಒಂದು ಸೃಜನಶೀಲ ಸಾಹಿತ್ಯಿಕ ನಾಟಕದ ವಾಚನ, ಇದು ಅನುಸಂಧಾನದ ಬೆಳಕಿನಲ್ಲಿ ಕಾಣುವ ಇತಿಹಾಸದ ವಿಮರ್ಶೆ ಅಲ್ಲ," ಎಂದೆ. ಅಂತೂ ಆ ಮಿತ್ರರು ಇದೇ ವಸ್ತುವನ್ನು ಕುರಿತು ಇನ್ನಷ್ಟು ಯೋಚಿಸಿ, ತಮ್ಮ ಒಂದು ನಾಟಕ ರಚನೆಗೆ ನಿರ್ಣಯಿಸಿದ್ದರು.

***

ಬಿ.ವಿ. ಕಾರಂತರಿಗೆ ಗಿರೀಶ ಯಾವಾಗಲೂ ಕೃತಜ್ಞರಾಗಿರಬೇಕು, ಆಗಿದ್ದರು. ಕಾರಂತರು ಕರ್ನಾಟಕದಲ್ಲಿ ಗಿರೀಶರಿಗೆ ವರ್ಣಮಯ ವ್ಯಕ್ತಿತ್ವವನ್ನು, ಅವರ ನಾಟಕಗಳಿಗೆ ಅಪಾರ ಖ್ಯಾತಿಯನ್ನು ನೀಡಿದ್ದಲ್ಲದೇ, ಗಿರೀಶರ ಬಹುತೇಕ ಕನ್ನಡ ನಾಟಕಗಳನ್ನು ಹಿಂದಿಗೆ ಅನುವಾದಿಸಿದರು, ಅವುಗಳ ಪ್ರಯೋಗ, ಪ್ರಚಾರಕ್ಕೆ ಅನುವು ಮಾಡಿಕೊಟ್ಟರು.

ಕೆ.ಡಿ. ಕುರ್ತಕೋಟಿ, ಬಿ.ವಿ. ಕಾರಂತ, ಜಿ.ಬಿ. ಜೋಶಿ ಗಿರೀಶರಿಗೆ ಪ್ರಾಣವಾಯು ನೀಡುತ್ತಿದ್ದ ತ್ರಿಮೂರ್ತಿಗಳು. ಆ ಬಲ ಇದ್ದುದರಿಂದಲೇ, ತಮ್ಮ ಮೂಲ ಚಿಂತನೆ, ಬರವಣಿಗೆ ಇಂಗ್ಲಿಷ್ ಮೂಲಕ ಹೊಮ್ಮುತ್ತಿದ್ದರೂ, "ನಾನು ಕನ್ನಡ ಲೇಖಕ, ಕನ್ನಡ ನಾಟಕ ಮಾತ್ರ ನನ್ನ ಮಾಧ್ಯಮ" ಎಂದು ಸಾರಿದರು ಗಿರೀಶ. ಭಾರತದಲ್ಲಿ ನಾಟಕಕ್ಕೆ ಜ್ಞಾನಪೀಠ ಪ್ರಶಸ್ತಿ ಪಡೆದು ಕನ್ನಡ, ಕರ್ನಾಟಕ, ಭಾರತದ ರಂಗಭೂಮಿಗಳ ಕೀರ್ತಿ ಹೆಚ್ಚಿಸಿದವರು ಅವರು ಎಂಬುದನ್ನು ಅಲ್ಲಗಳೆಯಲಾಗದು.

ಧಾರವಾಡದಿಂದ ದೂರವಾದ ನಂತರ ಬೆಂಗಳೂರು ಗಾಳಿ ಬಡಿದವರಂತೆ ಹೇಳಿಕೆಗಳ